ರಾಜ್ಯದಲ್ಲಿ ಬಾರ್ ಲೈಸನ್ಸ್ ನೀಡುವ ನಿಯಮ

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ಪ್ರಸ್ತಾಪ ಮಾಡುವ ಸಮಯಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು, ಗೃಹಮಂತ್ರಿಗಳು ಇಬ್ಬರೂ ಇದ್ದಾರೆ. ಬಹಳ ಸಂತೋಷವಾಗುತ್ತಿದೆ. ರಾಜ್ಯದಲ್ಲಿ ಬಾರ್ ಲೈಸೆನ್ಸ್ ಕೊಡತಕ್ಕ ಒಂದು ನಿಯಮವನ್ನು ಸರ್ಕಾರದವರು ತಡೆಹಿಡಿದಿದ್ದಾರೆ. ರಾಮನಗರದಲ್ಲಿ ದಿನಾಂಕ 1.1.1998ರಂದು ಒಂದು ಬಾರ್ ಲೈಸೆನ್ಸ್ ಇಸ್ಯು ಆಯಿತು. ಅದು ಪ್ರವಾಸೋದ್ಯಮದ ಅಡಿಯಲ್ಲಿ ಕೊಟ್ಟಿದ್ದಾರೆ. ಆದರೆ ಸರ್ಕಾರ ದಿನಾಂಕ 1.6.97ಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರವಾಸೋದ್ಯಮದ ನಿಯಮದಡಿಯಲ್ಲಿ ಬಾರ್ ಲೈಸೆನ್ಸನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಅದೇ ನಿಯಮದಡಿಯಲ್ಲಿ ದಿನಾಂಕ 1.198ರಂದು ಬಾರ್ ಲೈಸೆನ್ಸ್ ಕೊಟ್ಟಿದ್ದಾರೆ. ಲೈಸೆನ್ಸ್ ಕೊಟ್ಟ 15 ದಿವಸಕ್ಕೆ ಬಾರ್ ತೆಗೆಯಬಾರದೆಂದು ಹೇಳುತ್ತಾರೆ. ಆಮೇಲೆ ಮಾರ್ಚಿ 27ಕ್ಕೆ ಎಕ್ಸೈಜ್ ಇನ್ಸ್ ಪೆಕ್ಟರ್ ಒಂದು ಎಂಡಾರ್ಸ್‌ಮೆಂಟ್ ಇಷ್ಯೂ ಮಾಡುತ್ತಾರೆ ಬಾರ್ ತೆಗೆಯಬಾರದೆಂದು. ಬಾರ್ ಮಾಲೀಕ ಹೈಕೋರ್ಟ್‌ಗೆ ಹೋಗಿ ಎಂಡಾರ್ಸ್‌ಮೆಂಟಿಗೆ ಸ್ಟೇ ತರುತ್ತಾರೆ. ನೀವು ಆಶ್ಚರ್ಯಪಡುತ್ತೀರಿ ಕಳೆದ 2ನೇ ತಾರೀಖು 500 ಜನ ಪೋಲೀಸರು, 32 ಜನ ಸಬ್ ಇನ್ಸ್‌ಪೆಕ್ಟರ್ಸ್, ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ಸ್ ಲೆಕ್ಕವೇ ಇಲ್ಲ. 14 ಜನ ಸರ್ಕಲ್ ಇನ್ಸ್‌ಪೆಕ್ಟರ್, 4 ಜನ ಡಿವೈಎಸ್‌ಪಿಗಳು. ಒಬ್ಬರು ಅಡಿಶನಲ್ ಎಸ್‌ಪಿ ಇಷ್ಟೂ ಜನ.....

ಉಪಾಧ್ಯಕ್ಷರು : ಶೂನ್ಯವೇಳೆಯಲ್ಲಿ ತಾವು ಇತಿಹಾಸ ಹೇಳುತ್ತಿದ್ದೀರಿ ಇದೇನು?

ಶ್ರೀ ಸಿ.ಎಂ. ಲಿಂಗಪ್ಪ : ಇಷ್ಟು ಪೋಲೀಸ್ ಸಿಬ್ಬಂದಿ ಇಟ್ಟುಕೊಂಡು ಬಾರ್ ತೆರೆಯುತ್ತಾರೆ. ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಉಪ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ, ನಿಯಮದ ಪ್ರಕಾರ ಅದನ್ನು ಮುಂದುವರಿಸುತ್ತೀರಾ ಅಥವಾ ನಿಲ್ಲಿಸುತ್ತೀರಾ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ. ರಿಪೋರ್ಟ್ ಬಂದಮೇಲೆ ನಿಲ್ಲಿಸಬೇಕಾದರೆ ನಿಲ್ಲಿಸುತ್ತೇನೆ. ಅದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನೋಡೋಣ. ನನಗೆ ವಿಷಯ ಗೊತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ರಿಪೋರ್ಟ್ ತರಿಸಿಕೊಂಡು ಅಲ್ಲಿ ಏನು ಮಾಡಬೇಕೋ ಮಾಡುತ್ತೇನೆ.

ಮಾರ್ಕಂಡೇಯ ಮತ್ತು ಮಹದಾಯಿ ನದಿ ಯೋಜನೆಯಡಿಯಲ್ಲಿ ಜಮೀನು ಕಳೆದುಕೊಂಡವರಿಗೆ ಜಮೀನು

ಉಪಾಧ್ಯಕ್ಷರು : ಮಾನ್ಯ ಸಚಿವರಾದ ನಾಗೇಗೌಡರೇ, ನನ್ನದೊಂದು ವಿಚಾರವನ್ನು ಹೇಳುವುದು ಇದೆ. ಖಾನಾಪುರದಲ್ಲಿ ಸರ್ಕಾರಿ ಭೂಮಿ ಇದೆ. 16 ಸಾವಿರ ಎಕರೆ ಎಕ್ಸಸ್ ಲ್ಯಾಂಡ್ ಇದೆ. ಮಾರ್ಕಂಡೇಯ ಮತ್ತು ಮಹದಾಯಿ ನದಿ ಯೋಜನೆಯಲ್ಲಿ ಯಾರು ಜಮೀನು ಕಳೆದುಕೊಂಡಿದ್ದಾರೆ ಅವರಿಗೆ ಆ ಭೂಮಿಯನ್ನು ಮೀಸಲು ಇಡಬೇಕೆಂದು ಹೇಳುತ್ತೇನೆ. ಏನು ಎಕ್ಸಸ್ ಲ್ಯಾಂಡ್ ಇದೆ ಅಂಥ